**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.72/2020**

**(ಚಾ.ಸಾ.15/ಪ್ರಾ.ಸಾ.12)**

ತಾಃ 02.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ರೇಣುಕಾ ಪ್ರಸಾದ್ |
| ತಂದೆಯ ಹೆಸರು | ಬಸಾಳಪ್ಪ |
| ವಯಸ್ಸು | 61 ವರ್ಷ |
| ಉದ್ಯೋಗ | ನಿವೃತ್ತ ಉಪನಿರೀಕ್ಷಕರು |
| ವಾಸ ಸ್ಥಳ | ಕೆಂಗೇರಿ, ಬೆಂಗಳೂರು |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನಾನು 2017 ರಿಂದ 2020 ರವರೆಗೆ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಉಪನಿರೀಕ್ಷಕನಾಗಿ ಕೆಲಸ ಮಾಡಿರುತ್ತೇನೆ. ದಿಃ02.02.2019 ರಂದು ನಾನು ಠಾಣಾ ಪ್ರಭಾರದ ಕರ್ತವ್ಯದಲ್ಲಿ ಇರುವಾಗ ನೆಲಮಂಗಲ ವೃತ್ತ ನಿರೀಕ್ಷಕರು ನಮ್ಮ ಠಾಣಾ ಮೊಕದ್ದಮೆ ಸಂಖ್ಯೆ 340/2019 ರಲ್ಲಿ ಪ್ರ.ವ.ವ ಮತ್ತು ದೂರನ್ನು ದೃಢೀಕರಿಸಿ ಕೊಡಲು ಕೇಳಿದ್ದು ಅದರಂತೆ ನಾನು ಸದರಿ ಪ್ರ.ವ.ವ ಮತ್ತು ದೂರನ್ನು ದೃಢೀಕರಿಸಿ ನೀಡಿರುತ್ತೇನೆ. ಈ ಕುರಿತು ಹೇಳಿಕೆಯನ್ನು ನೀಡಿರುತ್ತೇನೆ. ಈಗ ನಾನು

ದೃಢೀಕರಿಸಿದ ಪ್ರ.ವ.ವ ಅನ್ನು ನೋಡುತ್ತಿದ್ದು ಅದನ್ನು ನಿ.ಪಿ.15 ಹಾಗೂ ಅದರ ಮೇಲೆ ಇರುವ ನನ್ನ ಸಹಿಯನ್ನು ನಿ.ಪಿ.15(ಎ) ಎಂದು ಗುರುತಿಸಲಾಯಿತು. ಈಗ ನಾನು ದೃಢೀಕರಿಸಿದ ದೂರನ್ನು ನೋಡುತ್ತಿದ್ದು ಅದನ್ನು ನಿ.ಪಿ.16 ಹಾಗೂ ಅದರ ಮೇಲೆ ಇರುವ ನನ್ನ ಸಹಿಯನ್ನು ನಿ.ಪಿ.16(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿಪರ ಶ್ರೀ. ವಕೀಲರಿಂದಃ**

2. ಆರೋಪಿ ಪರ ವಕೀಲರನ್ನು ಕೂಗಿಸಲಾಯಿತು ಆರೋಪಿ ಪರ ವಕೀಲರು ಹಾಜರಾಗಿದ್ದು ಆದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃಇಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಶಿಲ್ಪಾ ಕೆ.ಎಸ್.)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.